**ಸಾಕ್ಷಿಯನ್ನು ದಿನಾಂಕಃ 05.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಕೆ ಸಿ ಆರ್ ವಕೀಲರಿಂದಃ**

1. ನಾನು ನಿವೃತ್ತ ಸರ್ಕಾರಿ ನೌಕರ ಎಂದರೆ ಸರಿ. ನಾನು ಆ ವಿಷಯವನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಅದರ ಅವಶ್ಯಕತೆ ಇರದಿದ್ದ ಕಾರಣ ಬರೆಸಿಲ್ಲ. ನನ್ನ ವಾಸ ಬಿಡದಿ ಎಂದರೆ ಸರಿ, ಮೊದಲು ಮದ್ದೂರಿನಲ್ಲಿ ಇದ್ದೆ. ನನ್ನ ಪ್ರಮಾಣ ಪತ್ರದಲ್ಲಿ ಬಿಡದಿಯಲ್ಲಿ ವಾಸ ಇರುವುದಾಗಿ ಬರೆಸಿಲ್ಲ ಎಂದರೆ ಸರಿ. ನಾನು ಯಾವ ಅರ್ಜಿಯ ಮೇಲೆ ವಿಚಾರಣೆ ಕೊಡುತ್ತಿದ್ದೇನೆ ಎಂದರೆ ಎಂ ಎ ಮೇಲೆ ಕೊಡುತ್ತಿದ್ದೇನೆ. ನಾನು ಕೇಸ್ ನಂಬರ್ 418/2021 ರ ಜಮೀನಿನ ಮೇಲೆ ವಿಚಾರಣೆ ಹೇಳುತ್ತಿದ್ದೇನೆ. ಆ ಕೇಸ್ ನಲ್ಲಿ ವಕೀಲರಿಗೆ ವಿಷಯಗಳನ್ನು ನಾನೇ ಹೇಳಿದ್ದೆ ಎಂದರೆ ಸರಿ. ಅದಕ್ಕೆ ಪೂರಕವಾದ ದಾಖಲೆಗಳನ್ನು ವಕೀಲರಿಗೆ ನಾನೇ ಕೊಟ್ಟಿದ್ದೆ ಎಂದರೆ ಸರಿ. ಆ ಕೇಸ್ ನಲ್ಲಿ ಪ್ರತಿ ಸಾರಿ ಏನು ಆಗುತ್ತಿದೆ ಎಂದು ನಾನು ತಿಳಿದುಕೊಳ್ಳುತ್ತಿದ್ದೆ ಎಂದರೆ ಸರಿ. ವಿಚಾರಣಾ ನ್ಯಾಯಾಲಯದಲ್ಲಿ ಯಾವ ಅರ್ಜಿ ವಜಾ ಆಗಿದೆ ಎಂದು ಹೇಳಲು ದಾಖಲಾತಿ ನೋಡಬೇಕು. ನನ್ನ ಅರ್ಜಿ ಯಾವ ದಿನಾಂಕದಂದು ವಜಾ ಆಗಿತ್ತು ಎಂದರೆ 2023 ರಲ್ಲಿ ವಜಾ ಆಗಿತ್ತು. ಆ ರೀತಿ ಅರ್ಜಿ ವಜಾ ಆದ ನಂತರ ಮೇಲ್ಮನವಿ ಸಲ್ಲಿಸಲು ನನಗೆ ತೊಂದರೆ ಇತ್ತು. ನ್ಯಾಯಾಲಯದಲ್ಲಿ ದಾಖಲಾತಿಗಳನ್ನು ತೆಗೆದುಕೊಂಡು ಹೊಸದಾಗಿ ದಾವೆ ಹೂಡಿದ್ದರಿಂದ ಸಮಯ ಆಗಿರುತ್ತದೆ. ನಾನು ಹೊಸದಾಗಿ ದಾವೆ ಹೂಡಿಲ್ಲ, ಅಸಲು ದಾವಾ 418 ರಲ್ಲಿಯೇ ಹೊಸದಾಗಿ ಅರ್ಜಿ ಸಲ್ಲಿಸಿದ್ದೇನೆ.

2. ನನ್ನ ಪ್ರಮಾಣ ಪತ್ರದಲ್ಲಿ ಹೊಸ ದಾವೆಯನ್ನು ಹೂಡಲು ಅನುಮತಿ ಕೇಳಿ ಎಂದು ಬರೆದಿದ್ದು ಆ ರೀತಿ ನಾನು ಹೊಸ ದಾವೆಯನ್ನು ಸಲ್ಲಿಸಿಲ್ಲ, ಹಳೆ ದಾವೆಯಲ್ಲಿಯೇ ಹೊಸದಾಗಿ ಕೇಳಿಕೊಂಡಿದ್ದೇನೆ. ದಿಃ13.06.2023 ರಲ್ಲಿ ಯಾವ ಅರ್ಜಿ ವಜಾ ಆಗಿತ್ತು ಎಂದರೆ ಅಸಲು

ದಾವಾ 418 ವಜಾ ಆಗಿತ್ತು.

3. ಈ ಮೇಲ್ಮನವಿ ಸಲ್ಲಿಸಲು 650 ದಿನ ವಿಳಂಭ ಆಗಿದೆ. ಆ ರೀತಿ ವಿಳಂಭ ನ್ಯಾಯಾಲಯದಿಂದ ದಾಖಲಾತಿ ಪಡೆದಕೊಂಡಲು ಆಗಿರುತ್ತದೆ. ವಿಳಂಭಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಕೊಟ್ಟಿಲ್ಲ. ನಾನು ಉದ್ದೇಶಪೂರ್ವಕವಾಗಿ ವಿಳಂಭ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ನಾನು ಎದುರುದಾರರಿಗೆ ತೊಂದರೆ ಕೊಡಲು ವಿಳಂಭವಾಗಿ ಮೇಲ್ಮನವಿ ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನ್ಯಾಯಾಲಯದ ಆದೇಶ ಆದ ವಿಷಯ ಆಗಲೇ ಗೊತ್ತಿದ್ದರೂ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 27.04.2024 ರಂದು ಅಸಲುದಾವಾ ನಂಬರ್ 418 ನ್ನೇ ತಿದ್ದುಪಡಿ ಮಾಡಲು ಅರ್ಜಿ ಹಾಕಿದ್ದೆ. ಮೇಲ್ಮನವಿಯಲ್ಲಿ ಹೇಳಿರುವ ನನ್ನ ಅರ್ಜಿ ವಜಾ ಆದ ಮೇಲೆ ಸುಳ್ಳು ವಿಷಯಗಳನ್ನು ಸೇರಿಸಿ ತಿದ್ದುಪಡಿಗೆ ಅರ್ಜಿ ಹಾಕಿದ್ದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
ಮದ್ದೂರು.